೯೦೦. ಮಾನ್ಯ ಸದಸ್ಯರಾದ ಶ್ರೀ ಎಚ್. ಎ. ಎಚ್. ಎಂ, ಗೌನ್ರವರು ಸದನದಲ್ಲಿ ಹಾಜರಿರಲಿಲ್ಲ.

ಕೆ.ಜಿ.ಎಫ್.ನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯುವುದು.

೭೪೮. ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶು ಸಂಗೋಪನೆ ಹಾಗೂ ಪಶುವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್.ದಲ್ಲಿರುವ ಪಶು ವೈದ್ಯ ಸಂಸ್ಥೆಗಳ ಸಂಖ್ಯೆಷ್ಟು ಮತ್ತು ದನಗಳ ಆರೋಗ್ಯವನ್ನು ಈ ಪಶು ವೈದ್ಯ ಸಂಸ್ಥೆಗಳು ನೋಡಿಕೊಳ್ಳುತ್ತಿವೆ ?

ಆ) ಸರ್ಕಾರವು ಮತ್ತೊಂದು ಪಶು ವೈದ್ಯ ಶಾಲೆಯನ್ನು ಕೆ. ಜಿ. ಎಫ್. ನಲ್ಲಿ ಸ್ಥಾಪಿಸಲು ಉದ್ದೇಶಿಸಿದೆಯೆ ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನೆಯ ರಾಜ್ಯ ಸಚಿವರು).—

ಅ) ಕೆ.ಜಿ.ಎಫ್.ನಲ್ಲಿ ಒಂದು ಪಶುವೈದ್ಯಶಾಲೆ ಇದ್ದು, ಅದು ೧೮,೭೦೦ ದನಗಳ ಆರೋಗ್ಯವನ್ನು ನೋಡಿಕೊಳ್ಳಲಾಗುತ್ತಿದೆ.

ಆ) ಇಲ್ಲ.

ಶ್ರೀ ಟಿ.ಎಸ್, ಮಣಿ.—ನಮ್ಮಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆ ಆದುದರಿಂದ ಅಲ್ಲಿ ಹಾಸ್ಪೆಟಲ್‌ನ್ನು ಮಾಡಬೇಕು.

ಶ್ರೀ ಸಿದ್ಧರಾಮಯ್ಯ.—ಇನ್ನೂ ಒಂದು ಪಶು ವೈದ್ಯ ಶಾಲೆಯನ್ನು ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಅಲ್ಲಿರತಕ್ಕಂತಹ ಜಾನುವಾರುಗಳ ಸಂಖ್ಯೆಗೆ ಇನ್ನೂ ಒಂದು ಪಶುವೈದ್ಯ ಶಾಲೆಯಂನ್ನು ನಿರ್ಮಿಸುವ ಪರಿಸ್ಥಿತಿ ಇಲ್ಲ.

ಶ್ರೀ ಟಿ.ಎಸ್. ಮಣಿ.—ಇವಾಗ ಅಲ್ಲಿ ಹೆಚ್ಚಾಗಿ ಕೇಸ್‌ಸ್‌ಗಳು ಬರುತ್ತಿವೆ. ಅದಕ್ಕೆ ಇನ್ನೊಂದು ಹಾಸ್ಪಿಟಲ್ ಬೇಕಾಗಿದೆ. ೫೦ ಮೈಲುಗಳಿಂದ ಜಾನುವಾರುಗಳನ್ನು ಕರೆದುಕೊಂಡು ಬರಬೇಕಾಗಿದೆ, ಆದುದರಿಂದ ಇನ್ನೊಂದು ಹಾಸ್ಪಿಟಲ್‌ನ್ನು ಮಾಡಿಕೊಡುತ್ತೀರಾ ?

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೆ. ಜಿ. ಎಫ್. ನಲ್ಲಿ ರಾಸುಗಳ ಸಂಖ್ಯೆಗೆ ಅನುಗುಣವಾಗಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ಮೂರು ಪಶು ವೈದ್ಯ ಶಾಲೆಯನ್ನು ಕಟ್ಟಬೇಕೆಂದು ಇದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಹೊಸ ಹಾಸ್ಪಿಟಲ್‌ನ್ನು ಕೊಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಇನ್ನು ಮುಂದೆ ಆದರ ಬಗ್ಗೆ ಯೋಚನೆ ಮಾಡೋಣ.

ಶಹಾಬಾದ್‌ನಲ್ಲಿರುವ ಶಾಲೆಯ ಕಟ್ಟಡಗಳು.

೭೪೯. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

೧) ಶಹಾಬಾದ ಕ್ಷೇತ್ರದ ಎಷ್ಟು ವಿವಿದ್ದೋದ್ದೇಶ ಶಾಲೆ ಹಾಗೂ ಪ್ರೌಢ ಶಾಲೆಗಳು ತಮ್ಮದೇ ಆದ ಕಟ್ಟಡಗಳನ್ನು ಹೊಂದಿವೆ?

೨) ಶಹಾಬಾದ್‌ನಲ್ಲಿ ಹೆಣ್ಣು ಮಕ್ಕಳ ಮತ್ತು ಸರ್ಕಾರಿ ಪ್ರೌಢಶಾಲೆಯು ಕಟ್ಟಡ ಅತಿ ದುಃಸ್ಥಿತಿಯಲ್ಲಿರುವುದರಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಹಾಗಿದ್ದಲ್ಲಿ ಸದರಿ ಶಾಲಾ ಕಟ್ಟಡಗಳ ದುರಸ್ತಿಗಾಗಿ ಈ ವರ್ಷದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ದುರಸ್ತಿ ಕಾಮಗಾರಿಯು ಯಾವಾಗ ಪೂರ್ಣಕೆ ಆಗುವುದು ?